KAHS610031992024

**1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.**

ಉಪಸ್ಥಿತರು : **ಶ್ರೀ ಪುರುಷೋತ್ತಮ ಟಿ.ಪಿ. ಬಿ.ಎ., ಎಲ್.ಎಲ್.ಬಿ.**
1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆ 772/2024**

ದಿನಾಂಕ **: 25** ನೇ ಜುಲೈ **2026**

ವಾದಿ :

1. ಶ್ರೀಮತಿ ನೀಲಮ್ಮ ಉಃ ಲೋಲಾಕ್ಷಮ್ಮ ಕೋಂ
ಲೇಟ್ ಪುಟ್ಟಸ್ವಾಮಯ್ಯ,
ವಯಸ್ಸುಃ ಸುಮಾರು 62 ವರ್ಷ,

2. ಶ್ರೀ ಜಯರಾಮ ಬಿನ್
ಲೇಟ್ ಪುಟ್ಟಸ್ವಾಮಯ್ಯ,
ವಯಸ್ಸುಃ ಸುಮಾರು 35 ವರ್ಷ,

3. ಶ್ರೀಮತಿ ವನಿತಾ ಬಿನ್
ಲೇಟ್ ಪುಟ್ಟಸ್ವಾಮಯ್ಯ,
ವಯಸ್ಸುಃ ಸುಮಾರು 33 ವರ್ಷ,

4. ಶ್ರೀಮತಿ ಜಯಲಕ್ಷ್ಮೀ ಬಿನ್
ಲೇಟ್ ಪುಟ್ಟಸ್ವಾಮಯ್ಯ,
ವಯಸ್ಸುಃ ಸುಮಾರು 32 ವರ್ಷ,

ಎಲ್ಲರ ವಾಸಃ ಬಾಳಗುಂಚಿ ಗ್ರಾಮ,
ಹಿರೀಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**(ಪರವಾಗಿ ಶ್ರೀ. ಬಿ. ಕೆ.ವಿ. ವಕೀಲರು)**

**V/s**

ಪ್ರತಿವಾದಿ : ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಬಾಳಗುಂಚಿ ಗ್ರಾಮ ಪಂಚಾಯತಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**(ಪರವಾಗಿ ಶ್ರೀ.ಡಿ. ಕೆ. ಆರ್. ವಕೀಲರು)**

<u>ಮಧ್ಯಕಾಲೀನ ಅರ್ಜಿ ನಂ.2</u>

ಅರ್ಜಿದಾರರು : ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

(ಪ್ರತಿವಾದಿ)

**V/s**

ಎದುರುದಾರರು : ಶ್ರೀಮತಿ ನೀಲಮ್ಮ ಉಃ ಲೋಲಾಕ್ಷಮ್ಮ
ಕೋಂ ಲೇಟ್ ಪುಟ್ಟಸ್ವಾಮಯ್ಯ ಮತ್ತು ಇತರರು

(ವಾದಿ )

## :: ಮಧ್ಯಕಾಲೀನ ಅರ್ಜಿ ನಂ.2 ರ ಮೇಲೆ ಆದೇಶ:

ಅರ್ಜಿದಾರರು/ಪ್ರತಿವಾದಿಯು ಸದರಿ ಮಧ್ಯಕಾಲೀನ ಅರ್ಜಿ ನಂ.2, ಕ್ರಮಾದೇಶ 26 ನಿಯಮ 9 ಮತ್ತು ಸಹವಾಚಕ ಕಲಂ. 151 ರ ಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಘನ ನ್ಯಾಯಾಲಯದವರು ಕೃಪೆ ಮಾಡಿ ವಾದಿಯರ ಅನುಸೂಚಿ ಸ್ವತ್ತನ್ನು ಮತ್ತು ಪ್ರತಿವಾದಿ ಪಂಚಾಯಿತಿಗೆ ಬಿಟ್ಟಿರುವ ಸ.ನಂ.1/1 ರ ಸ್ವತ್ತನ್ನು ಅಳತೆ ಮಾಡುಲು ಈ ಘನ ನ್ಯಾಯಾಲಯದಿಂದ ಒಬ್ಬ ತಾಲ್ಲೂಕು ಸರ್ವೆಯವರನ್ನು ನೇಮಕ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

2. ಪ್ರತಿವಾದಿಯು ಸದರಿ ಮಧ್ಯಂತರ ಅರ್ಜಿಯ ತನ್ನ ಪ್ರಮಾಣ ಪತ್ರದಲ್ಲಿ ತಿಳಿಸುವುದೇನೆಂದರೆ, ವಾದಿಯರು ಪ್ರಸ್ತುತ ಕೇಸನ್ನು ಬಾಳಗಂಚಿ ಗ್ರಾಮ ಪಂಚಾಯಿತಿಯ ವಿರುದ್ಧ ದಾವಾ ಸ್ವತ್ತಿಗೆ ತಂಟೆ ತಕರಾರು ಮಾಡದಂತೆ ಕೋರಿ ದಾವಾ ಹೂಡಿದ್ದು, ವಾದಿಯರ ದಾವಾ ಅನುಸೂಚಿತ ಸ್ವತ್ತನ್ನು ಮತ್ತು ಪ್ರತಿವಾದಿಯ ಪಂಚಾಯಿತಿಗೆ ಬಿಟ್ಟುಕೊಟ್ಟಿರುವ ಸ್ವತ್ತಾದ ಸ.ನಂ.1/1 ರ ಸ್ವತ್ತನ್ನು ಅಳತೆ ಮಾಡುವ ಬಗ್ಗೆ ಈ ಘನ ನ್ಯಾಯಾಲಯದ ಒಬ್ಬರು ವಕೀಲರನ್ನು ಮತ್ತು ತಾಲ್ಲೂಕು ಸರ್ವೇಯರ್ ರವರನ್ನು ನೇಮಕ ಮಾಡಿ ಘನ ನ್ಯಾಯಾಲಯಕ್ಕೆ ವರದಿ ಮಾಡುವಂತೆ ಆದೇಶ ಮಾಡಬೇಕಾಗಿ ಕೋರಿಕೊಂಡಿದ್ದು, ಒಂದುವೇಳೆ, ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದರೇ, ಸಾರ್ವಜನಿಕರಿಗೆ ಕುಡಿಯುವ ನೀರು ಇಲ್ಲದಂತಾಗಿ ತೊಂದರೆ ಉಂಟಾಗುವುದೇ ಹೊರತು ವಾದಿಯರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದು ಪ್ರಾರ್ಥಿಸಿರುತ್ತಾರೆ.

3. ವಾದಿಯು ಸದರಿ ಅರ್ಜಿಗೆ ತಮ್ಮ ತಕರಾರು ಸಲ್ಲಿಸಿದ್ದು, ಸದರಿಯವರು ತಿಳಿಸುವುದೇನೆಂದರೆ, ಪ್ರತಿವಾದಿಯು ಸಲ್ಲಿಸಿರುವ ಮೇಲ್ಕಂಡ ಅರ್ಜಿಯು ಕಾನೂನು ಮತ್ತು ವಿದ್ಯಾಮಾನಗಳ ರೀತ್ಯಾ ನಿಲ್ಲತಕ್ಕದ್ದಾಗಿರುವುದಿಲ್ಲ ಹಾಗೂ ಪ್ರತಿವಾದಿ ತಂದಿರುವ ಅರ್ಜಿ ವಜಾ ಆಗತಕ್ಕದ್ದು. ಸದರಿ ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ವಾದಿಯ ಪರ ವಕೀಲರು ಸಲ್ಲಿಸಿದ್ದ ಮೆಮೊ ಆಫ್ ಇನ್ಸ್ಟ್ರಕ್ಷನ್ ದಾವಾ ಷೆಡ್ಯೂಲ್ ಸತ್ತುಗಳನ್ನು ಅಳತೆ ಮಾಡಿರುವುದಿಲ್ಲ. ಮೆಮೊ ಆಫ್ ಇನ್ಸ್ಟ್ರಕ್ಷನ್ ನಂತೆ, ಸ್ವತ್ತನ್ನು ಅಳತೆ ಮಾಡಿ ಕಲ್ಲನ್ನು ನೆಡಿಸದೇ ಸುಳ್ಳು ವರದಿಯನ್ನು ನೀಡಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತು ಅಂದರೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಹಿರೀಸಾವೆ ಹೊಬಳಿ, ಬಾಳಗಂಚಿ ಗ್ರಾಮದ ಸರ್ವೆ ನಂಬರ್ 188/1 ರಲ್ಲಿ 0.03.08.00 ಗುಂಟೆ ಜಮೀನಿಗೆ ಚೆಕ್ಕುಬಂದಿಃ ಪೂರ್ವಕ್ಕೆ- ಶಿವಣ್ಣ, ಮಹಾಲಿಂಗಯ್ಯರವರ ಜಮೀನು, ಪಶ್ಚಿಮಕ್ಕೆ-ಲಕ್ಷ್ಮಮ್ಮ ಮತ್ತು ಕೃಷ್ಣಯ್ಯ ರವರ ಜಮೀನು, ಉತ್ತರಕ್ಕೆ- ನಕಾಶೆ ದಾರಿ ಮತ್ತು ರಾಘವೇಂದ್ರ, ಚೆಲುವಯ್ಯರವರ ಜಮೀನು, ದಕ್ಷಿಣಕ್ಕೆ - ವಸಂತ ಕುಮಾರ್ ಬಿನ್ ನಂಜಯ್ಯ ಆಗಿದ್ದು, ಸದರಿ ಸ್ವತ್ತು ವಾದಿಯ ಪಿತ್ರಾರ್ಜಿತವಾದ ಸ್ವತ್ತಾಗಿದ್ದು, ಸದರಿ ಸ್ವತ್ತಿನ ದಾಖಲಾತಿಗಳಲ್ಲಿ 0.03.08.00 ಗುಂಟೆ ಜಮೀನಿನ ಬದಲು 0.02.04.00 ಗುಂಟೆ ಎಂದು ನಮೂದಾಗಿದ್ದು, ಇದರ ಬಗ್ಗೆ ವಾದಿಯು ತಿದ್ದುಪಡಿ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ ಕಾರಣ, ಸದರಿ ದಾವಾ ಸ್ವತ್ತನ್ನು ಅಳತೆ ಮಾಡಲು ವಾದಿಗೆ, ಪ್ರತಿವಾದಿಗೆ ನೋಟಿಸನ್ನು ನೀಡಿರುವುದು ಎಂದು ತಿಳಿಸಿದ್ದು, ಆದರೆ ಸದರಿ ಪ್ರತಿವಾದಿಗಳು ಯಾವುದೇ ನಡವಳಿಕೆಗಳನ್ನು ನಡೆಸಿರುವುದಿಲ್ಲ. ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಹಿರೀಸಾವೆ ಹೊಬಳಿ,

ಬಾಳಗಂಚಿ ಗ್ರಾಮದ ಸರ್ವೆ ನಂಬರ್. 188/1 ರಲ್ಲಿ 0.03.08.00 ಗುಂಟೆ ಜಮೀನನ್ನು ಅಳತೆ ಮಾಡಲು ಒಬ್ಬರು ವಕೀಲರು ಮತ್ತು ಸರ್ವೆಯರ್‌ರವರನ್ನು ನೇಮಕ ಮಾಡಿ, ಮಾನ್ಯ ಘನ ನ್ಯಾಯಾಲಯಕ್ಕೆ ವರದಿ ನೀಡುವುದು. ಆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಯು ಸ್ಥಳದಲ್ಲಿ ಹಾಜರಿರತಕ್ಕದ್ದು ಎಂದು ತಿಳಿಸಿದ್ದು, ಆದರೆ ಸದರಿ ವಾದಿಯ ಮಾತನ್ನು ಲೆಕ್ಕಿಸದೇ ಅಳತೆಕಾರ್ಯವನ್ನು ಮಾಡಿ, ಸುಳ್ಳು ವರದಿಯನ್ನು ನೀಡಿರುತ್ತಾರೆ. ಆದುದರಿಂದ, ಸದರಿ ಮದ್ಯಂತರ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

4. ವಾದಿಯು ಪ್ರಸ್ತುತ ದಾವೆಯನ್ನು ದಾವಾ ಸ. ನಂ.188/1 ರಲ್ಲಿ 1 ನೇ ವಾದಿಯ ಗಂಡನಾದ ಮತ್ತು 2 ರಿಂದ 4 ನೇ ವಾದಿಗಳ ತಂದೆಯಾದ ಲೇಟ್ ಪುಟ್ಟ ಸ್ವಾಮಯ್ಯ ಬಿನ್ ಲೇಟ್ ನಂಜಯ್ಯ ರವರಿಗೆ 0.03.04 ಗುಂಟೆ ವಿಸ್ತೀರ್ಣದ ಸ್ವತ್ತು ಇರುವುದಾಗಿ ಕೈ ಬರವಣಿಗೆಯ ಪಹಣಿಯಲ್ಲಿ ನಮೂದಾಗಿದ್ದು, ಕಂಪ್ಯೂಟರ್ ಪಹಣಿಯಲ್ಲಿ 0.02.04 ಗುಂಟೆ ವಿಸ್ತೀರ್ಣ ಎಂದು ನಮೂದಾಗಿದ್ದು, ಸದರಿ ಸ್ವತ್ತು ಪುಟ್ಟಸ್ವಾಮಯ್ಯ ರವರಿಂದ ವಾದಿಗಳಿಗೆ ಬಂದಿರುತ್ತದೆ. ಈ ವಾದಿಯು ದಿನಾಂಕಃ30.08.2024 ರಂದು ಮತ್ತು 05.09.2024 ರಂದು ಪ್ರತಿವಾದಿಗಳಿಗೆ ನೋಟಿಸ್ ನೀಡಿ ದಿನಾಂಕ 28.08.2024 ರಂದು ಪ್ರತಿವಾದಿಗಳು ತಮ್ಮ ಸಿಬ್ಬಂದಿಗಳೊದಿಗೆ ಬಂದು ದಾವಾಸ್ವತ್ತಿನಲ್ಲಿ ಏಕಾಏಕಿ ಬಂದು ನೀರಿನ ಪೈಪು ಅಳವಡಿಸಲು ಗುಂಡಿಯನ್ನು ತೆಗೆಯಲು ದಾವಾಸ್ವತ್ತಿಗೆ ಕಾನೂನು ಬಾಹಿರವಾಗಿ ಮತ್ತು ಅಕ್ರಮವಾಗಿ ಪ್ರವೇಶ ಮಾಡಿ ವಾದಿಗಳ ಶಾಂತಿಯುತ ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ಪ್ರತಿವಾದಿಗಳ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಈ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

5. ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ ವಿವರವಾದ ಲಿಖಿತ ತಕರಾರನ್ನು ಸಲ್ಲಿಸಿ ದಾವಾಂಶಗಳನ್ನು ಅಲ್ಲಗಳೆದು ಬಾಳಗಂಚಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಬಾಳಗಂಚಿ ಗ್ರಾಮದ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಸರಿ ಸುಮಾರು ವರ್ಷಗಳಿಂದ ಚಲುವಯ್ಯರವರ ಮಕ್ಕಳಾದ ಬಿ.ಸಿ.ರಾಘವೇಂದ್ರ ಬಿನ್ ಚಲುವಯ್ಯರವರಿಗೆ ಸೇರಿರುವ ಸ.ನ.1/1 ರಲ್ಲಿ 1.17.08 ಇರುವ ವಿಸ್ತೀರ್ಣದಲ್ಲಿ ಹಳೆಯ ಓವರ್ ಹೆಡ್ ಟ್ಯಾಂಕ್ ಇದ್ದು, ಇದು ಈಗ ಪೂರ್ಣ ಶಿಥಿಲಗೊಂಡಿರುವ ಬಗ್ಗೆ ಕುಡಿಯುವ ನೀರಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿದ್ದು, ತುರ್ತಾಗಿ ಟ್ಯಾಂಕ್ ನ್ನು ತೆರವುಗೊಳಿಸಲು ಮೇಲಾಧಿಕಾರಿಗಳಿಂದ ಅನುಮತಿ ಪಡೆದಿರುತ್ತಾರೆ. ಅದೇ

ಸ್ಥಳದ ಪಕ್ಕದಲ್ಲಿ ಜೆ.ಜೆ.ಎಂ. ಟ್ಯಾಂಕ್ ನಿರ್ಮಿಸಲು ಸ್ಥಳದ ಮಾಲೀಕರಾದ ಬಿ.ಸಿ.ರಾಘವೇಂದ್ರ ರವರ ಅನುಮತಿ ಮೇರೆಗೆ ಗ್ರಾಮ ಪಂಚಾ ಯಿತಿ ಹಾಗೂ ಸಾರ್ವಜನಿಕರ ಒಪ್ಪಿಗೆ ಮೇರೆಗೆ ಹಳೆಯ ಟ್ಯಾಂಕ್ ಪಕ್ಕದಲ್ಲಿ, ಹೊಸ ಟ್ಯಾಂಕ್ ನಿರ್ಮಿಸಲು ದಿನಾಂಕ 04.09.2024 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಚನ್ನರಾಯಪಟ್ಟಣ ಇವರಿಂದ ಭೂ ಮಾಪಕರಿಂದ ಸ.ನಂ.1/1 ನ್ನು ಅಳತೆ ಮಾಡಿ, ಸರ್ವೆ ನಕ್ಷೆಯನ್ನು ನೀಡಿರುತ್ತಾರೆ. ಅದರಂತೆ ಓವರ್ ಹೆಡ್ ಟ್ಯಾಂಕ್ ಕಾಮಗಾರಿ ಮಾಡಲು ಪ್ರಾರಂಭಿಸಿರುತ್ತಾರೆ ಹಾಗೂ ತಳಪಾಯವನ್ನು ಸಹ ಹಾಕಿರುತ್ತಾರೆ. ಪ್ರತಿವಾದಿಯರು ವಾದಿಯರ ಜಾಗದಲ್ಲಿ ಯಾವುದೇ ಟ್ಯಾಂಕ್‌ನ ನಿರ್ಮಾಣ ಮಾಡುತ್ತಿರುವುದಿಲ್ಲ. ಬಿ.ಸಿ.ರಾಘವೇಂದ್ರ ಬಿನ್ ಚಲುವಯ್ಯರವರಿಗೆ ಸೇರಿರುವ ಸ.ನ.1/1 ರಲ್ಲಿ 1.17.08 ಇರುವ ವಿಸ್ತೀರ್ಣದಲ್ಲಿ ಹಳೇಯ ಓವರ್ ಹೆಡ್ ಟ್ಯಾಂಕ್ ಪಕ್ಕದಲ್ಲಿ ಕಾಮಗಾರಿ ಮಾಡುತ್ತಿರುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರು ಸಹ ಏನಾದರೂ ಮಾಡಿ ಟ್ಯಾಂಕ್ ಕಟ್ಟುವುದನ್ನು ನಿಲ್ಲಿಸಬೇಕೆಂದು ಸದರಿ ದಾವೆಯನ್ನು ತಂದಿರುತ್ತಾರೆ. ಟ್ಯಾಂಕ್ ಕಟ್ಟುವುದನ್ನು ನಿಲ್ಲಿಸಿದ್ದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವ ಉಂಟಾಗಿ ತೊಂದರೆ ಆಗುತ್ತದೆ. ವಾದಿಯರು ಪ್ರಸ್ತುತ ಕೇಸನ್ನು ನ್ಯಾಯಾಲಯದಲ್ಲಿ ಸುಳ್ಳು ನೆಪ ಹೇಳಿ ಸತ್ಯ ಸಂಗತಿಗಳನ್ನು ಮರೆ ಮಾಚಿ ಪ್ರತಿವಾದಿ ಮೇಲೆ ಸುಳ್ಳು ಆರೋಪ ಮಾಡಿ ಪ್ರಸ್ತುತ ದಾವೆಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಆದಕಾರಣ, ವಾದಿಯರು ಶುದ್ಧ ಹಸ್ತರಾಗಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಆದ್ದರಿಂದ ವಾದಿ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರ ಹೊಂದಲು ಅರ್ಹರಲ್ಲ ಎಂದು ಕೋರಿ ಕೊಂಡಿರುತ್ತಾರೆ.

6. ವಾದವನ್ನು ಕೇಳಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉಂಟಾಗಿರುತ್ತವೆ.

1. ನ್ಯಾಯಾಲಯದ ಆಯುಕ್ತರ ವರದಿಗಳನ್ನು ಪುರಸ್ಕರಿಸಲು ಯೋಗ್ಯವಾಗಿದೆಯೇ?

2. ಯಾವ ಆದೇಶ

8. ಈ ಮೇಲಿನ ಅಂಶಗಳಿಗೆ ನನ್ನ ನಿರ್ಣಯ ಈ ಕೆಳಗಿನಂತೆ ಇರುತ್ತವೆ.

ಅಂಶಃ 1 ಸಕಾರಾತ್ಮಕವಾಗಿ

ಅಂಶಃ 2 ಅಂತಿಮ ಆದೇಶದಂತೆ ಈ
ಕೆಳಕಂಡಂತೆಃ

## ಕಾರಣಗಳು

9. **ಅಂಶಃ1-** ವಾದಿಯು ತಮ್ಮ ದಾವೆ ಸಲ್ಲಿಸಿದಾಗ ಸ. ನಂ. 188/1 ರ ಕೈ ಬರಹದ ಪಹಣಿಯನ್ನು ಹಾಜರುಪಡಿಸಿದ್ದು, MR 11/91-92 ರ ಪ್ರಕಾರ ಪುಟ್ಟಸ್ವಾಮಯ್ಯ ಬಿನ್ ನಂಜಯ್ಯ ರವರ ಹೆಸರಿನಲ್ಲಿ 0.3 1/4 ಗುಂಟೆ 2000-01 ನೇ ಸಾಲಿನಲ್ಲಿದ್ದು, ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ. 2024-25 ನೇ ಸಾಲಿನ ಕಂಪ್ಯೂಟರ್ ನ ಪಹಣಿಯನ್ನು ಹಾಜರುಪಡಿಸಿದ್ದು, ಸ.ನಂ.188/1 ರಲ್ಲಿ ಪುಟ್ಟಸ್ವಾಮಯ್ಯ ಬಿನ್ ನಂಜಮ್ಮ ರವರ ಹೆಸರಿಗೆ 0.02.04 ಗುಂಟೆ ಇದ್ದು, ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ. ಮುಂದುವರೆದು, MRT 24/2023-24 ರ ದಾಖಲೆಯನ್ನು ಹಾಜರುಪಡಿಸಿದ್ದು, ಸ.ನಂ. 188/1 ರಲ್ಲಿ ಪುಟ್ಟಸ್ವಾಮಯ್ಯ ಬಿನ್ ನಂಜಯ್ಯ ರವರಿಗೆ 0.02.04 ಗುಂಟೆಗೆ ಹಕ್ಕು ಬದಲಾವಣೆಯಾಗಿರುತ್ತದೆ. ಪ್ರತಿವಾದಿಯು ರಾಘವೇಂದ್ರ ರವರ ಜೊತೆ ಸ.ನಂ. 1/1 ರ ಸ್ವತ್ತಿನಲ್ಲಿ ಕುಡಿಯುವ ನೀರಿನ ಟ್ಯಾಂಕ್ ನ್ನು ನಿರ್ಮಿಸಲು ಕರಾರನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯು ಸ.ನಂ.1/1 ರ ಸ್ವತ್ತನ್ನು ಅಳತೆ ಮಾಡಿ ವರದಿ ನೀಡುವಂತೆ ಆಯುಕ್ತರನ್ನಾಗಿ ಒಬ್ಬ ವಕೀಲರನ್ನು ಮತ್ತು ಒಬ್ಬ ತಾಲ್ಲೂಕು ಸರ್ವೆಯರ್ ರವರನ್ನು ನೇಮಕ ಮಾಡಬೇಕೆಂದು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರಡಿ ಮಧ್ಯಂತರ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೆ ವಾದಿಯು ತಕರಾರು ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಪ್ರತಿವಾದಿಯರು ಸಲ್ಲಿಸಿರುವ ಮೇಲ್ಕಂಡ ಅರ್ಜಿಗಳು ಕಾನೂನು ಮತ್ತು ವಿದ್ಯಾಮಾನಗಳ ರೀತ್ಯಾ ನಿಲ್ಲತಕ್ಕದ್ದಾಗಿರುವುದಿಲ್ಲ. ಸದರಿ ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಶುದ್ಧಾಂಗ ಸುಳ್ಳಾಗಿರುತ್ತದೆ. ಪ್ರತಿವಾದಿಯರು ತಂದಿರುವ ಮೇಲ್ಕಂಡ ಅರ್ಜಿಗಳು ವಜಾ ಆಗತಕ್ಕದ್ದು ಎಂದು ಪ್ರಾರ್ಥಿಸಿರುತ್ತಾರೆ.

10. ನ್ಯಾಯಾಲಯದಿಂದ ಆಯುಕ್ತರಾಗಿ ವಕೀಲರಾದ ಕೆ. ಎಲ್. ಚೇತನ ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನೇಮಕವಾಗಿದ್ದು, ವಾದಿಯರು ಮತ್ತು ಪ್ರತಿವಾದಿ ಹಾಗೂ ಸಾಕ್ಷಿದಾರರ ಸಮಕ್ಷಮ ಸ್ಥಳಕ್ಕೆ ಭೇಟಿ ನೀಡಿ ದಾವಾಸ್ವತ್ತು ಮತ್ತು ಸ.ನಂ.1 ರ ಸ್ವತ್ತುಗಳನ್ನು ಅಳತೆ ಮಾಡಿ ವರದಿಯನ್ನು ನಕಾಶೆ ಮತ್ತು ದಾಖಲೆಗಳೊಂದಿಗೆ

ಸಲ್ಲಿಸಿದ್ದು, ಸದರಿ ಆಯುಕ್ತರುಗಳ ವರದಿ ಪ್ರಕಾರ ಸ.ನಂ.1 / ರಿ. ಸ. ನ. 1/1 ರಲ್ಲಿ ಉದ್ದೇಶಿತ ಕುಡಿಯುವ ನೀರಿನ ಟ್ಯಾಕ್ ನ್ನು ಪ್ರತಿವಾದಿಯ ನಿರ್ಮಿಸುತ್ತಿದ್ದು, ಸದರಿ ಸ್ವತ್ತಿನಲ್ಲೀ ತುಂಬಾ ಹಳೆಯದಾದ ಕುಡಿಯುವ ನೀರಿನ ಟ್ಯಾಂಕಟ್ ಇದ್ದು, ಅದು ಶಿಥಿಲವಾಗಿರುತ್ತದೆ. ಸದರಿ ಉದ್ದೇಶಿತ ಕುಡಿಯವ ನೀರಿನ ಟ್ಯಾಂಕ್ ನಿರ್ಮಿಸುತ್ತಿರುವ ಸ್ವತ್ತಿಗೂ ಮತ್ತು ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ. ಸದರಿ ಎರಡು ಸ್ವತ್ತುಗಳ ನಡುವೆ 2 ಮೀಟರ್ ಜಾಗವನ್ನು ಪ್ರತಿವಾದಿಯು ಬಿಟ್ಟು ಸದರಿ ಕುಡಿಯುವ ನೀರಿನ ಟ್ಯಾಂಕನ್ನು ನಿರ್ಮಿಸುತ್ತಿದ್ದಾರೆ. ವಾದಿಯರ ಜಮೀನು ಸ.ನಂ. 1 ರಲ್ಲಿ ಬರುವುದಿಲ್ಲ ಎಂದು ಸ್ಪಷ್ಟವಾಗಿ ನಕಾಶೆಯಲ್ಲಿ ಮತ್ತು ವರದಿಯಲ್ಲಿ ಉಲ್ಲೇಖಿಸಿದ್ದು, ಸದರಿ ಹೇಳಿಕೆಗೆ ಮತ್ತು ನೋಟಿಸ್ ಗೆ 1 ಮತ್ತು 3ನೇ ವಾದಿಗಳು ಖುದ್ದು ನೋಟಿಸ್ ಪಡೆದು ಪ್ರತಿವಾದಿ ಮತ್ತು ಸಾಕ್ಷಿದಾರರ ಸಮಕ್ಷಮ ಹಾಜರಿದ್ದು, ಅಳತೆಯಾದ ನಂತರ ಸಹಿ ಮಾಡಿರುವುದು ಸ್ಪಷ್ಟವಾಗುತ್ತದೆ.

11. ಆದಕಾರಣ, ಈಗ ಬೇಸಿಗೆ ಕಾಲವಾಗಿದ್ದು, ಹಳೆಯ ಕುಡಿಯುವ ನೀರಿನ ಟ್ಯಾಂಕ್ ಶಿಥಿಲವಾಗಿರುವ ಕಾರಣ ಕೇಂದ್ರ ಸರ್ಕಾರದ ಜಲ ಜೀವನ ಮಿಷನ್ ರಡಿ ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಳೆಯ ಟ್ಯಾಂಕ್ ಇದ್ದ, ಸ.ನಂ. ಸ್ವತ್ತಿನಲ್ಲೀ ಪ್ರತಿವಾದಿಯು ಗ್ರಾಮಸ್ಥರ ಕುಡಿಯುವ ನೀರಿಗೆ ಭವಿಷ್ಯದಲ್ಲಿ ತೊಂದರೆಯಾಗದಂತೆ ಸಾರ್ವಜನಿಕರ ಹಿತಕ್ಕಾಗಿ ಉದ್ದೇಶಿತ ಕುಡಿಯುವ ನೀರಿನ ಟ್ಯಾಂಕನ್ನು ಸ.ನಂ.1 ರ ಮಾಲೀಕರೊಂದಿಗೆ ಕರಾರನ್ನು ಮಾಡಿಕೊಂಡು ದಿನಾಂಕಃ24.09.2024 ರಂದು ಸ್ಥಳ ಪರಿಶೀಲಿಸಿ ದಿನಾಂಕಃ 03.12.2024 ರಂದು ಕೇಂದ್ರ ಸರ್ಕಾರದ ಜಲ ಜೀವನ ಮಿಷನ್ ರಡಿ ಉದ್ದೇಶಿತ ಕುಡಿಯವ ನೀರಿನ ಟ್ಯಾಂಕ್ ನ ಕಾಮಗಾರಿಗೆ ತಳಪಾಯ ಮತ್ತು ಪಿಲ್ಲರ ನ್ನು ಹಾಕಿರುವುದು ಫೋಟೋಗಳಿಂದ ಧೃಢಪಡುತ್ತದೆ. ಅದೇರೀತಿ, 11.11.2024 ರಂದು ಪ್ರತಿವಾದಿಯು ತಹಸೀಲ್ದಾರ್ ರವರಿಗೆ ನಿವೇದನೆಯನ್ನು ಸಲ್ಲಿಸಿ, ದಿನಾಂಕಃ 04.09.2024 ರಂದು ಅಳತೆ ಕಾರ್ಯಕ್ಕೆ ವಾದಿಗಳು ತೊಂದರೆ ನೀಡಿರುವುದನ್ನು ಉಲ್ಲೇಖಿಸಿರುತ್ತಾರೆ. ವಾದಿಗಳು ತಮಗೆ ಸೇರಿದ ಸ್ವತ್ತಿನ ನೈಜ ವಿಸ್ತೀರ್ಣ ಮತ್ತು ಅದರ ಭೌತಿಕ ಅಸ್ತಿತ್ವದ ಬಗ್ಗೆಯೇ ನಿಖರವಾದ ದಾಖಲೆಗಳು ನ್ಯಾಯಾಲಯದ ಮುಂದೆ ಹಾಜರುಪಡಿಸದೇ, ಸ.ನಂ.1 ರಲ್ಲಿ ಪ್ರತಿವಾದಿಯು ಸಾರ್ವಜನಿಕರ ಉದ್ದೇಶಕ್ಕಾಗಿ ಉದ್ದೇಶಿತ ನೀರಿನ ಟ್ಯಾಂಕ್ ನ ತಳಪಾಯ ಹಾಕಿದ ನಂತರ ತೊಂದರೆ ನೀಡುತ್ತಿರುವುದು ಕಾನೂನುಬಾಹಿರವಾಗಿದ್ದು, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ದವಾಗಿರುತ್ತದೆ. ಅಲ್ಲದೇ, ವಾದಿಗಳು ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ

ವಾದಿಗಳಿಗೆ ದಾವಾ ಸ.ನಂಬರ್ ನಲ್ಲಿ 02.04 ಗುಂಟೆ ಜಮೀನು ಇದ್ದು, ಕೈ ಬರವಣಿಗೆಯೇ ಪಹಣಿಯಂತೆ ಪುಟ್ಟಸ್ವಾಮಯ್ಯ ರವರಿಗೆ ಸ.ನಂ.188/1 ರಲ್ಲಿ 03.04 ಗುಂಟೆ ಇದ್ದು, ಸದರಿ ದಾವಾ ಸ್ವತ್ತು 2001-02 ರಿಂದ 2024-25 ನೇ ಸಾಲಿನವರೆಗೂ ಅಂದರೆ ದಾವೆ ಸಲ್ಲಿಸುವಾಗಲೂ ವಾದಿಗಳ ಹೆಸರಿಗಾಗಲೀ ಅಥವಾ ಪುಟ್ಟಸ್ವಾಮಯ್ಯ ರವರ ಹೆಸರಿಗೆ ಇದೆ ಎಂಬುವುದನ್ನು ರುಜುವಾತುಪಡಿಸಲು ದಾಖಲೆಗಳನ್ನು ಹಾಜರುಪಡಿಸದೇ, ತಮ್ಮ ಕುಟುಂಬಕ್ಕೆ 0.3 1/4 ಗುಂಟೆ ಜಮೀನು ಇದೆ ಎಂದು ವಾದಿಸುವುದು ಸಮಂಜಸವಲ್ಲ. ಅಲ್ಲದೇ, ಸದರಿ ಪುಟ್ಟಸ್ವಾಮಯ್ಯ ರವರಿಗೆ ಸ.ನ. 1881/1 ರಲ್ಲಿ 03 1/4 ಗುಂಟೆ ಜಮೀನು ಬಂದಿರುತ್ತದೆ ಎಂಬುವುದಕ್ಕೆ ಹಕ್ಕು ಶೀರ್ಷಿಕೆಯುಳ್ಳ ದಾಖಲೆಗಳನ್ನು ಹಾಜರುಪಡಿಸದೇ ಅವರ ಹೆಸರಿಗೆ ಇರುವ ಕೈ ಪಹಣಿಯನ್ನು ಹಾಜರುಪಡಿಸಿ, ಸ.ನಂ.1/ ರಿ . ಸ. ನಂ. 1/1 ರಲ್ಲಿ ಸಾರ್ವಜನಿಕರಿಗಾಗಿ ನಿರ್ಮಿಸುತ್ತಿರುವ ಕುಡಿಯುವ ನೀರಿನ ಟ್ಯಾಂಕ್ ನ ನಿರ್ಮಾಣಕ್ಕೆ ಅಡ್ಡಿ ಪಡಿಸುವುದು ಕಾನೂನು ಬದ್ದವಾಗಿ ಸಮಂಜಸವಲ್ಲ. ಅಲ್ಲದೇ, ಸ.ನಂ.188/1 ರಲ್ಲಿ ಉದ್ದೇಶಿತ ಕುಡಿಯುವ ನೀರಿನ ಟ್ಯಾಂಕ್ ಅನ್ನು ನಿರ್ಮಿಸುತ್ತಿಲ್ಲ. ಸದರಿ ಸ.ನಂ.1 ರ ಸ್ವತ್ತಿಗೂ ಮತ್ತು ದಾವಾಸ್ವತ್ತಿಗೂ ಸಂಬಧ ಇಲ್ಲ ಎಂದು ಆಯುಕ್ತರು ವರದಿ ನೀಡಿದ್ದು, ಸದರಿ ವರದಿ ದಾಖಲೆಗಳ ಆಧಾರದ ಮೆಲೆ ಹಾಗೂ ವಾದಿಯು ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ಉದ್ದೇಶಿತ ಕುಡಿಯುವ ನೀರಿನ ಟ್ಯಾಂಕ್ ನ್ನು ಸ.ನಂ.1/ ರಿ.ಸ. ನಂ. 1/1 ರಲ್ಲಿ ನಿರ್ಮಿಸುತ್ತಿರುವುದರಿಂದ ವಾದಿಗಳಿಗೆ ಯಾವುದೇ ರೀತಿಯ ತೊಂದರೆ, ನಷ್ಟ ಹಾನಿಯಾಗುವುದಿಲ್ಲ. ಒಂದುವೇಳೆ, ಸದರಿ ಕಾಮಗಾರಿಯನ್ನು ವಿನಾಃ ಕಾರಣ ತಡೆದರೆ ಸಾರ್ವಜನಿಕರಿಗೆ, ಜಾನುವಾರುಗಳಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿ ಜೀವ ಹಾನಿಗೆ, ರೋಗಗಳಿಗೆ ಕಾರಣವಾಗುತ್ತದೆ. ಅಲ್ಲದೇ, ಪ್ರತಿವಾದಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಅವರ ಮೂಲಭೂತ ಕರ್ತವ್ಯ ಆಗಿರುತ್ತದೆ. ಆದುದರಿಂದ, ವರದಿಗಳಲ್ಲಿ ಹೇಳಿರುವಂತೆ ಸ. ನಂ. 1 ರಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಅಲ್ಲದೇ, ದಾವಾ ಸ್ವತ್ತಿನಲ್ಲಿ ಉದ್ದೇಶಿತ ಕುಡಿಯುವ ನೀರಿನ ಟ್ಯಾಂಕ್ ನ್ನು ನಿರ್ಮಿಸುತ್ತಿಲ್ಲವಾದ್ದರಿಂದ ಸದರಿ ನೀರಿನ ಟ್ಯಾಂಕ್ ನ ನಿರ್ಮಾಣದಿಂದ ವಾದಿಗಾಗಲೀ ಅಥವಾ ಅವರ ಸ್ವತ್ತಿಗಾಗಲೀ ಯಾವುದೇ ತೊಂದರೆಯಾಗುವುದಿಲ್ಲ. ಒಂದುವೇಳೆ, ಉದ್ದೇಶಿತ ಕಾಲಾವಧಿಯೊಳಗೆ ಸದರಿ ಟ್ಯಾಂಕನ್ನು ನಿರ್ಮಿಸದಿದ್ದರೆ, ಈಗಾಲೇ ಶಿಥಿಲವಾಗಿರು ಟ್ಯಾಂಕ್ ನಿಂದ ಗ್ರಾಮಸ್ಥರಿಗೆ ನೀರನ್ನು ಪೂರೈಸಲು ಸಾಧ್ಯವಿಲ್ಲ ಹಾಗೂ

ಗ್ರಾಮಸ್ಥರಿಗೆ ಮತ್ತು ಪ್ರತಿವಾದಿಗೆ ತುಂಬಲಾರದ ನಷ್ಟ ಮತ್ತು ತೊಂದರೆಯುಂಟಾಗುತ್ತದೆ. ಆದುದರಿಂದ, ಉದ್ದೇಶಿತ ನೀರಿನ ಟ್ಯಾಂಕನ್ನು ಸ. ನಂ. 1 ಅಥವಾ ರಿ .ಸ.ನಂ.1/1 ರಲ್ಲಿ ನಿರ್ಮಿಸಿದರೆ ವಾದಿಗಳ ಸ್ವಾಧೀನಕ್ಕೆ ಯಾವುದೇ ರೀತಿಯ ಭಂಗವುಂಟಾಗುವುದಿಲ್ಲ. ಆದುದರಿಂದ, ಪ್ರತಿವಾದಿಯು ನೀರಿನ ಟ್ಯಾಂಕ್ ನಿರ್ಮಿಸಬಹುದ್ದಾಗಿರುತ್ತದೆ. ಆದುದರಿಂದ ಅಂಶ 1 ಅನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

12. ಅಂಶ **2** ಃ - ಈ ಮೇಲೆ ಚರ್ಚಿಸಲಾದಂತೆ ಹಾಗೂ ಅವುಗಳಿಗೆ ನೀಡಿದ ಕಾರಣಗಳಿಂದಾಗಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ

## ಆದೇಶ

ಪ್ರತಿವಾದಿಯವರ ಮಧ್ಯಕಾಲೀನ ಅರ್ಜಿ ನಂ.2, ಕ್ರಮಾದೇಶ 26 ನಿಯಮ 9 ಮತ್ತು ಸಹವಾಚಕ ಕಲಂ. 151 ರ ಅರ್ಜಿಯಂತೆ ನ್ಯಾಯಾಲಯದ ಆಯುಕ್ತರಾಗಿ ವಕೀಲರು ಮತ್ತು ಭೂ ದಾಖಲೆಗಳ ಸಹಾಯಕ ನಿದೇಶಕರು ಸಲ್ಲಿಸಿರುವ ವರದಿಯನ್ನು ಪುರಸ್ಕರಿಸಿದ್ದು, ರಿ.ಸರ್ವೆ. ನಂ.1/1 ರಲ್ಲಿ ಉದ್ದೇಶಿತ ಕುಡಿಯುವ ನೀರಿನ ಟ್ಯಾಂಕ್ ನ ಕಾಮಗಾರಿಯನ್ನು ಮುಂದುವರೆಸಲು ಪ್ರತಿವಾದಿಯು ಹಕ್ಕುಳ್ಳವರಾಗಿರುತ್ತಾರೆ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 25 ನೇ ದಿವಸ ಜುಲೈ ಮಾಹೆ 2026 ರಂದು ನಾನು ಘೋಷಿಸಿದ್ದೇನೆ.)

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.